ನೀವಿಬ್ಬರು ಕೇಳಿದ್ದಕ್ಕಿಂತಲೂ ಉತ್ತಮವಾದ ಒಂದನ್ನು ನಾನು ನಿಮಗೆ ತಿಳಿಸಿಕೊಡಲೇ? ನೀವು ನಿದ್ದೆ ಮಾಡಲು ಹೋಗುವಾಗ ಮೂವತ್ತಮೂರು ಬಾರಿ ಸುಬ್ಹಾನಲ್ಲಾಹ್, ಮೂವತ್ತಮೂರು ಬಾರಿ ಅಲ್- ಹಮ್ದುಲಿಲ್ಲಾಹ್, ಮೂವತ್ತನಾಲ್ಕು ಬಾರಿ ಅಲ್ಲಾಹು ಅಕ್ಬರ್ ಹೇಳಿರಿ. ಇದು ನಿಮಗೆ ಒಬ್ಬ ಸೇವಕ ದೊರೆಯುವುದಕ್ಕಿಂತಲೂ ಉತ್ತಮವಾಗಿದೆ

ಅಲಿ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಂದ ವರದಿ. ಒಮ್ಮೆ ಫಾತಿಮ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರುಬ್ಬುವ ಕಲ್ಲಿನಿಂದ ತನ್ನ ಕೈಗೆ ಉಂಟಾದ ಗಾಯಗಳ ಬಗ್ಗೆ ದೂರು ನೀಡಲು ಪ್ರವಾದಿಯವರ (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಬಳಿಗೆ ಹೋದರು. ಅವರ ಬಳಿ ಕೆಲವು ಗುಲಾಮರಿದ್ದಾರೆಂಬ ಸುದ್ದಿ ಅವರಿಗೆ ತಲುಪಿತ್ತು. ಆದರೆ ಅವರು ಅಲ್ಲಿ ಪ್ರವಾದಿಯವರನ್ನು ಕಾಣಲಿಲ್ಲ. ಅವರು ಆಯಿಶ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರಿಗೆ ವಿಷಯವನ್ನು ತಿಳಿಸಿದರು. ಪ್ರವಾದಿಯವರು ಬಂದಾಗ ಆಯಿಶ ನಡೆದ ಸಂಗತಿಯನ್ನು ಅವರಿಗೆ ತಿಳಿಸಿದರು. ನಂತರ, ನಾವು ಮಲಗಿದ್ದಾಗ ಪ್ರವಾದಿಯವರು ನಮ್ಮ ಬಳಿಗೆ ಬಂದರು. ನಾವು ಎದ್ದೇಳಲು ಮುಂದಾದಾಗ ಅವರು ಹೇಳಿದರು: "ಅಲ್ಲೇ ಇರಿ." ಅವರು ಬಂದು ನನ್ನ ಮತ್ತು ಫಾತಿಮರ ನಡುವೆ ಕುಳಿತರು. ಅವರು ಎಷ್ಟು ಹತ್ತಿರವಾಗಿದ್ದರೆಂದರೆ ನನ್ನ ಹೊಟ್ಟೆಗೆ ಅವರ ಪಾದಗಳ ತಂಪು ಅನುಭವವಾಗುತ್ತಿತ್ತು. ಅವರು ಹೇಳಿದರು: "ನೀವಿಬ್ಬರು ಕೇಳಿದ್ದಕ್ಕಿಂತಲೂ ಉತ್ತಮವಾದ ಒಂದನ್ನು ನಾನು ನಿಮಗೆ ತಿಳಿಸಿಕೊಡಲೇ? ನೀವು ನಿದ್ದೆ ಮಾಡಲು ಹೋಗುವಾಗ ಮೂವತ್ತಮೂರು ಬಾರಿ ಸುಬ್ಹಾನಲ್ಲಾಹ್, ಮೂವತ್ತಮೂರು ಬಾರಿ ಅಲ್-ಹಮ್ದುಲಿಲ್ಲಾಹ್, ಮೂವತ್ತನಾಲ್ಕು ಬಾರಿ ಅಲ್ಲಾಹು ಅಕ್ಬರ್ ಹೇಳಿರಿ. ಇದು ನಿಮಗೆ ಒಬ್ಬ ಸೇವಕ ದೊರೆಯುವುದಕ್ಕಿಂತಲೂ ಉತ್ತಮವಾಗಿದೆ." [صحيح] [متفق عليه]

ಪ್ರವಾದಿಯವರ (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಮಗಳು ಫಾತಿಮ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರುಬ್ಬುವ ಕಲ್ಲನ್ನು ರುಬ್ಬಿದ ಕಾರಣ ತನ್ನ ಕೈಗೆ ಉಂಟಾದ ಗಾಯಗಳ ಬಗ್ಗೆ ಅವರಲ್ಲಿ ದೂರಿಕೊಂಡರು. ಪ್ರವಾದಿಯವರ (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಬಳಿಗೆ ಕೆಲವು ಯುದ್ಧ ಕೈದಿಗಳು ಬಂದಾಗ, ಇವರಲ್ಲಿ ಒಬ್ಬರನ್ನು ಮನೆ ಕೆಲಸ ಮಾಡಲು ತನಗೆ ಸೇವಕನಾಗಿ ಕೊಡಬೇಕೆಂದು ಕೇಳಿಕೊಳ್ಳಲು ಅವರು ಹೋಗಿದ್ದರು. ಆದರೆ, ಅವರು ಮನೆಯಲ್ಲಿ ಅವರನ್ನು ಕಾಣಲಿಲ್ಲ. ಅಲ್ಲಿ ಆಯಿಶ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ಇದ್ದರು. ಅವರು ಅವರಿಗೆ ವಿಷಯ ತಿಳಿಸಿದರು. ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಬಂದಾಗ ಫಾತಿಮ ಬಂದು ಸೇವಕನನ್ನು ಕೇಳಿದ ಬಗ್ಗೆ ಆಯಿಶ ಅವರಿಗೆ ತಿಳಿಸಿದರು. ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಅಲಿ ಮತ್ತು ಫಾತಿಮ (ಅಲ್ಲಾಹು ಅವರಿಬ್ಬರ ಬಗ್ಗೆ ಸಂಪ್ರೀತನಾಗಲಿ) ರವರ ಮನೆಗೆ ಹೋದಾಗ, ಅವರಿಬ್ಬರು ನಿದ್ರೆ ಮಾಡಲು ಸಿದ್ಧತೆ ಮಾಡುತ್ತಿದ್ದರು. ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಅವರಿಬ್ಬರಿಗೆ ಎಷ್ಟು ಹತ್ತಿರವಾಗಿ ಕುಳಿತರೆಂದರೆ ಅವರ ಪಾದಗಳ ತಂಪು ಅಲಿ (ಅಲ್ಲಾಹು ಅವರ ಬಗ್ಗೆ ಸಂಪ್ರೀತನಾಗಲಿ) ರವರ ಹೊಟ್ಟೆಗೆ ಅನುಭವವಾಗುತ್ತಿತ್ತು. ಅವರು ಹೇಳಿದರು: "ಒಬ್ಬ ಸೇವಕನನ್ನು ಕೊಡಬೇಕೆಂದು ನೀವು ಕೇಳಿದ್ದಕ್ಕಿಂತಲೂ ಉತ್ತಮವಾದ ಒಂದನ್ನು ನಾನು ನಿಮಗೆ ತಿಳಿಸಿಕೊಡಲೇ?" ಅವರಿಬ್ಬರು ತಿಳಿಸಿಕೊಡಿ ಎಂದರು. ಆಗ ಪ್ರವಾದಿಯವರು (ಅವರ ಮೇಲೆ ಅಲ್ಲಾಹನ ಕೃಪೆ ಮತ್ತು ಶಾಂತಿಯಿರಲಿ) ಹೇಳಿದರು: "ನೀವು ರಾತ್ರಿ ನಿದ್ರೆ ಮಾಡಲು ಹೋಗವಾಗ, ಮೂವತ್ತ ನಾಲ್ಕು ಬಾರಿ "ಅಲ್ಲಾಹು ಅಕ್ಬರ್" ಎಂದು ಹೇಳಿರಿ, ಮೂವತ್ತ ಮೂರು ಬಾರಿ "ಸುಬ್ಹಾನಲ್ಲಾಹ್" ಎಂದು ಹೇಳಿರಿ ಮತ್ತು

ಮೂವತ್ತ ಮೂರು ಬಾರಿ "ಅಲ್-ಹಮ್ದುಲಿಲ್ಲಾಹ್" ಎಂದು ಹೇಳಿರಿ. ಈ ಸ್ಮರಣೆಗಳು ನಿಮಗೆ ಒಬ್ಬ ಸೇವಕ ದೊರೆಯುವುದಕ್ಕಿಂತಲೂ ಉತ್ತಮವಾಗಿದೆ."

http://www.sunnah.global/hadeeth/kn/show/6076